ಸೆಲೆಬ್ರಿಟಿ

■ ಹನಿ

# ಗುಲಾಂ ಅಲಿ ಬರುವರೆ?

ಮೊನ್ನೆ ಡಿಸೆಂಬರ್ 5ರಂದು 'ಗಝಲ್ ಮಾಂತ್ರಿಕ' ಉಸ್ತಾದ್ ಗುಲಾಂ ಅಲಿ 75ನೇ ವರ್ಷಕ್ಕೆ ಕಾಲಿಟ್ಟರು. (ಬರ್ತ್‌ಡೇ 5–12–1940) ಅವಿಭಜಿತ ಭಾರತ ಉಪಖಂಡದ ಅತ್ಯಂತ ಮಹತ್ವದ ಮತ್ತು ಜನಪ್ರಿಯ ಗಝಲ್ ಗಾಯಕರು ಗುಲಾಂ ಅಲಿ. ಅವರ ಜನಪ್ರಿಯತೆ ಅಮೆರಿಕ, ಬ್ರಿಟನ್ ಮತ್ತು ಕೊಲ್ಲಿ ದೇಶಗಳಲ್ಲೂ ವ್ಯಾಪಕವಾಗಿ ಹಬ್ಬಿದೆ. ಹುಟ್ಟುಹಬ್ಬ ಆಚರಿಸಿದ ಬೆನ್ನಲ್ಲೇ ಇನ್ನೊಂದು ಸುದ್ದಿಯೂ ಬಂತು– ಕೇರಳದಲ್ಲಿ ಜನವರಿ 15 (ತಿರುವನಂತಪುರ) ಮತ್ತು 17ರಂದು (ಕಲ್ಲಿಕೋಟೆ) ಉಸ್ತಾದ್ ಗುಲಾಂ ಅಲಿ ಹಾಡಲು ಬರುತ್ತಾರೆ.. ಎಂದು. ಸಂಗೀತದ ಉತ್ಥಾನಕ್ಕಾಗಿ ಕೆಲಸ ಮಾಡುತ್ತಿರುವ 'ಸ್ವರಾಲಯ'ದ ಆಶ್ರಯದಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎನ್ನುವುದು ಸುದ್ದಿ. ಆದರೆ 'ಕೇರಳಕ್ಕೆ ಗುಲಾಂ ಅಲಿ ಬಂದು ಹಾಡುತ್ತಾರೆ' ಎನ್ನುವುದನ್ನು ನಂಬಲು ಹೆಚ್ಚಿನವರು ಈಗ ತಯಾರಿಲ್ಲ. ಏಕೆಂದರೆ ಅದಕ್ಕೆ 'ಯೆಸ್' ಅನ್ನಬೇಕಾದವರು ಶಿವಸೇನೆಯ ನಾಯಕರು! 'ಭಾರತ–ಪಾಕಿಸ್ತಾನ ನಡುವಣ ರಾಜತಾಂತ್ರಿಕ ಸಂಬಂಧ ಸರಿಯಿಲ್ಲ. ಗಡಿಯಲ್ಲಿ ನಮ್ಮ ಮೇಲೆ ಗುಂಡು ಹಾರಿಸಲಾಗುತ್ತಿದೆ. ಉಗ್ರರನ್ನು ತರಬೇತಿ ಮಾಡಿ ನಮ್ಮ ದೇಶಕ್ಕೆ ಕಳುಹಿಸುತ್ತಿರುವ ಪಾಕಿಸ್ತಾನದೊಡನೆ ಯಾವ ಸಂಬಂಧವೂ ಬೇಡ. ಅಲ್ಲಿನ ಗಾಯಕರು ಇಲ್ಲಿಗೆ ಬರುವುದು ಬೇಡ. ಬಂದರೆ ಕಾರ್ಯಕ್ರಮ ನಡೆಯಲು ಬಿಡುವುದಿಲ್ಲ' ಎನ್ನುವುದು ಶಿವಸೇನೆಯ ನಿಲುವು.

ಈ ಬೆದರಿಕೆಯ ಹಿನ್ನೆಲೆಯಲ್ಲೇ ಇತ್ತೀಚಿನ ತಿಂಗಳಲ್ಲಿ ಗುಲಾಂ ಅಲಿ ಅವರು ಭಾರತಕ್ಕೆ ಬರಬೇಕಿದ್ದ ಮೂರು ಕಾರ್ಯಕ್ರಮಗಳು ರದ್ದಾಗಿವೆ.

ಅಕ್ಟೋಬರ್‌ನಲ್ಲಿ ಮುಂಬೈ ಮತ್ತು ಪುಣೆಯಲ್ಲಿ ಕಾರ್ಯಕ್ರಮ ನೀಡಲು ಗುಲಾಂ ಅಲಿ ಒಪ್ಪಿಕೊಂಡಿದ್ದರು. ಆದರೆ ಶಿವಸೇನೆಯ ಬೆದರಿಕೆಯಿಂದ ಕಾರ್ಯಕ್ರಮಗಳು ರದ್ದಾದವು. 'ನವೆಂಬರ್ 8ರಂದು ದೆಹಲಿಗೆ ಬಂದು ಹಾಡುತ್ತಾರೆ' ಎಂದು ಅಲ್ಲಿನ ಆಮ್ ಆದ್ಮಿ ಪಕ್ಷದ ಸರ್ಕಾರ ಪ್ರಕಟಿಸಿತು. ಆದರೆ ಗುಲಾಂ ಅಲಿ ಬರಲಿಲ್ಲ. 'ಅನಾರೋಗ್ಯದಿಂದ ಬರಲಿಲ್ಲ' ಎನ್ನುವುದು ಸರ್ಕಾರದ ಸ್ಪಷ್ಟೀಕರಣ. ಗುಲಾಂ ಅಲಿ ಸ್ಪಷ್ಟವಾಗಿ ಹೇಳಿದ್ದು– 'ನನ್ನ ಆರೋಗ್ಯ ಚೆನ್ನಾಗಿದೆ. ಭಾರತದಲ್ಲಿ ಕಲೆ ಮತ್ತು ಸಂಗೀತಕ್ಕೆ ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲ. ಹಾಗಾಗಿ ಬಂದಿಲ್ಲ.' ಆ ಬಳಿಕ 'ಡಿಸೆಂಬರ್ 3ರಂದು ಲಖನೌ ಸಂಗೀತ ಉತ್ಸವಕ್ಕೆ ಗುಲಾಂ ಅಲಿ ಬರುತ್ತಾರೆ' ಎಂದು ಅಲ್ಲಿನ ಸಮಾಜವಾದಿ ಪಕ್ಷದ ಸರ್ಕಾರ ಪ್ರಕಟಿಸಿತು. ಆದರೆ 'ನಾನು ಈ ಕಾರ್ಯಕ್ರಮ ಒಪ್ಪಿಕೊಂಡೇ ಇಲ್ಲ. ಯಾರೋ ತಪ್ಪು ಸುದ್ದಿ ನೀಡಿದ್ದಾರೆ' ಎಂದು ಮತ್ತೆ ಗುಲಾಂ ಅಲಿ ಸಮಜಾಯಿಷಿ ನೀಡಿದರು. ಈ ಮಧ್ಯೆ 'ಕೋಲ್ಕತ್ತಾದಲ್ಲಿ ಬಂದು ಹಾಡಿ' ಎಂದು ಅಲ್ಲಿನ ತೃಣಮೂಲ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕರೆದರು. ಉಸ್ತಾದ್ ಒಪ್ಪಲಿಲ್ಲ. 'ರಾಜಕೀಯದವರ ಬಳಕೆಗೆ ಒಳಗಾಗಲು ನಾನು ಬಯಸುವುದಿಲ್ಲ. ರಾಜಕೀಯದಲ್ಲಿ ನನಗೆ ಆಸಕ್ತಿಯೂ ಇಲ್ಲ' ಎನ್ನುವುದು ಉಸ್ತಾದ್ ನಿಲುವು.

'ನಾನೊಬ್ಬ ಕಲಾವಿದ. ನನಗೆ ಗೊತ್ತಿರುವುದು ಸಂಗೀತ ಮಾತ್ರ. ಕಲೆಗೆ ಗಡಿಗಳ ಗೊಡವೆ ಇಲ್ಲ. ನನ್ನ ಜೀವನದ ಉದ್ದಕ್ಕೂ ಇದನ್ನೇ ನಂಬಿಕೊಂಡವನು ನಾನು. ಭಾರತವೊಂದು ಶ್ರೇಷ್ಠ ದೇಶ. ಈ ದೇಶ ನನಗೆ ಯಾವತ್ತೂ ಪ್ರೀತಿ, ವಾತ್ಸಲ್ಯ ತೋರಿದೆ. ನನ್ನಲ್ಲಿ ಶಕ್ತಿ ಇರುವವರೆಗೂ ಭಾರತದಲ್ಲಿ ನಾನು ಹಾಡುತ್ತೇನೆ. ಆದರೆ ಸದ್ಯಕ್ಕೆ ಅಲ್ಲಿ ವಾತಾವರಣ ಸರಿಯಿಲ್ಲ. ಒತ್ತಡದ ಪರಿಸ್ಥಿತಿಯಲ್ಲಿ ಯಾರಾದರೂ ಸಂಗೀತವನ್ನು ಆಸ್ವಾದಿಸಲು ಸಾಧ್ಯವೆ?' ಎಂದು ಇತ್ತೀಚಿನ ಸಂದರ್ಶನವೊಂದರಲ್ಲಿ ಉಸ್ತಾದ್ ಗುಲಾಂ ಅಲಿ ಹೇಳಿರುವುದು ಸಂಗೀತದ ಕುರಿತ ಅವರ ಪ್ರೀತಿಯನ್ನೇ ಎತ್ತಿತೋರಿದೆ.

ಗುಲಾಂ ಅಲಿ ಅವರ ತಂದೆಯೂ ಶಾಸ್ತ್ರೀಯ ಸಂಗೀತ ಗಾಯಕ ಮತ್ತು ಸಾರಂಗಿ ನುಡಿಸುವವರು. ಮಗನಿಗೆ ಉಸ್ತಾದ್ ಬಡೇ ಗುಲಾಂ ಅಲಿ ಖಾನ್ ಅವರ ಹೆಸರನ್ನೇ ಇಟ್ಟರು. ಕಾಬೂಲಿಗೆ ಬಂದಿದ್ದ ಬಡೇ ಗುಲಾಂ ಅಲಿ ಖಾನ್ ಅವರಿಗೆ ಮಗನನ್ನು ಶಿಷ್ಯನನ್ನಾಗಿ ಸ್ವೀಕರಿಸಲು ಆತ ದುಂಬಾಲು ಬಿದ್ದಾಗ ಗುಲಾಂ ಅಲಿಗೆ ಇನ್ನೂ 14ರ ಹರೆಯ. ಬಡೇ ಗುಲಾಂ ಅಲಿಖಾನ್ ಒಪ್ಪಲಿಲ್ಲ. 'ನಾನು ಒಂದೆಡೆ ಕುಳಿತುಕೊಳ್ಳುವುದೇ ಇಲ್ಲ, ಇನ್ನು ಕಲಿಸುವುದು ಹೇಗೆ?' ಎನ್ನುವುದು ಅವರ ಪ್ರಶ್ನೆ. ಆದರೆ ಗುಲಾಂ ಅಲಿಯ ಅಪ್ಪ ಅಂಗಲಾಚಿದರು. 'ಸರಿ, ಒಂದು ಹಾಡು ಒಗೆ ನೋಡೋಣ' ಎಂದು ಬಡೇ ಗುಲಾಂ ಅಲಿಯವರು ಅವಕಾಶ ಕೊಟ್ಟರು. ದಿಗ್ಗಜರ ಎದುರು ಕುಳಿತು ಹೆದರದೇ ಹಾಡಿದ ಹುಡುಗ ಶಿಷ್ಯತ್ವದ ಅಗ್ನಿಪರೀಕ್ಷೆಯಲ್ಲಿ ಗೆದ್ದ. ಹಾಗೆ ಬಡೇಗುಲಾಂ ಅಲಿ ಯವರ ಶಿಷ್ಯರಾದ ಗುಲಾಂ ಅಲಿ, ಹೆಚ್ಚು ಕಲಿತದ್ದು ಮಾತ್ರ ಗುರುವಿನ ಮೂವರು ಸೋದರರ ಮೂಲಕ. ಏಕೆಂದರೆ ಬಡೇ ಗುಲಾಂ ಅಲಿಯವರು ಕಾರ್ಯಕ್ರಮಕ್ಕಾಗಿ ಪದೇ ಪದೇ ಪ್ರವಾಸ ಹೋಗುತ್ತಿದ್ದರು.

ಭಾರತದ ಸಿನಿಮಾ ಲೋಕಕ್ಕೆ ಗುಲಾಂ ಅಲಿಯವರ ಗಝಲ್ ಸ್ವರ ಪರಿಚಯವಾದದ್ದು 1982ರ 'ನಿಖಾಹ್' ಚಿತ್ರದ ಮೂಲಕ. 'ಚುಪ್‌ಕೆ ಚುಪ್‌ಕೆ ರಾತ್ ದಿನ್' ಎನ್ನುವ ಆ ಸಿನಿಮಾದ ಗಝಲ್ ಇವತ್ತಿಗೂ ಅತ್ಯಂತ ಜನಪ್ರಿಯ. ಸದಾ ನೆನಪಿಗೆ ಬರುವ ಇನ್ನೊಂದು ಗಝಲ್– ಹಮ್ ಕೊ ಕಿಸ್ ಕೆ ಘಮ್ ನೆ ಮಾರಾ..! 'ಹಸ್ರತೇಂ' ಎನ್ನುವ ಅವರ ಗಝಲ್ ಆಲ್ಬಂ 2014ರಲ್ಲಿ 'ಜಗತ್ತಿನ ಶ್ರೇಷ್ಠ ಗಝಲ್ ಸಂಗ್ರಹ' ಎನ್ನುವ ಪ್ರಶಸ್ತಿ ಪಡೆಯಿತು. 'ಆದರೆ 2013ರಲ್ಲಿ ಭಾರತ ಸರ್ಕಾರ ನನಗೆ ನೀಡಿದ –ಬಡೇ ಗುಲಾಂ ಅಲಿ ಖಾನ್ ಪ್ರಶಸ್ತಿ– ನನ್ನ ಜೀವನದ ಅತ್ಯಂತ ಶ್ರೇಷ್ಠ ಪ್ರಶಸ್ತಿ' ಎನ್ನುವುದು ಗುಲಾಂ ಅಲಿ ಅವರದ್ದೇ ಮಾತು. ಗುಲಾಂ ಅಲಿ ಕೇರಳಕ್ಕೆ ಬರುವರೆ..? ಬಂದರೆ ಲಾಭ ಸಂಗೀತಪ್ರಿಯರಿಗೇ. ■



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65